ಒ ಎಸ್ ನಂ.**1521/2013**
**ಪಿ.ಡಬ್ಲ್ಯೂ:2**

ಒ ಎಸ್ ನಂ.**1521/2013**
ಪಿ.ಡಬ್ಲ್ಯೂ:**2**

**<u>ದಿನಾಂಕಃ 12.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ. ಎಸ್.ಕೆ. ವೆಂಕಟಚಲಪತಿ, 3 ನೇ ಪ್ರತಿವಾದಿ ಪರ ವಕೀಲರಿಂದಃ-</u>**

ನಾನು ನನ್ನ ಹೆಂಡತಿಯಾಗಿರುವ ವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ. ವಾದಿ ಸಾಕ್ಷಿ ನುಡಿಯಲು ನನ್ನನ್ನು ಕರೆದಿದ್ದಾಳೆ. ನಿಪಿ.41 ವಿಲ್ ನನ್ನ ಬಳಿ ಇತ್ತು. ವಾದಿ ಭಾಗ ಕೇಳಿ ದಾವೆ ಹೂಡುವವಳಿದ್ದಾಳೆ ಎಂದು ನನಗೆ ದಾವೆ ಹೂಡುವ ಮುಂಚೆಯೇ ಗೊತ್ತಿತ್ತು ಎನ್ನುವುದು ನಿಜ. ದಾವೆ ಹೂಡುವ ಮುಂಚೆ ನಿಪಿ.41 ವಿಲ್ ಬಗ್ಗೆ ನನಗೆ ಮತ್ತು ನನ್ನ ಹೆಂಡತಿಗೆ ಗೊತ್ತಿತ್ತು. ನಿಪಿ.41 ವಿಲ್ ಈ ದಾವೆ ಶೆಡ್ಯೂಲ್ ಐಟಂ ನಂ.1 ಆಸ್ತಿಯ ಬಗ್ಗೆ ಇರುತ್ತದೆ ಎನ್ನುವುದು ನಿಜ. ನಿಪಿ.41 ವಿಲ್ ತಯಾರಿಸುವಾಗ 2 ನೇ ಪ್ರತಿವಾದಿ ಭಾಸ್ಕರ್ ಮೂರ್ತಿ ಹಾಜರಿದ್ದನು. 2 ನೇ ಪ್ರತಿವಾದಿ ದಿಃ 11.11.2011 ರಿಂದ ಕಾಣೆಯಾಗಿದ್ದಾನೆ. 2009 ರಲ್ಲಿ 2 ನೇ ಪ್ರತಿವಾದಿ, 3 ನೇ ಪ್ರತಿವಾದಿಯನ್ನು ಮದುವೆಯಾಗಿದ್ದನು. ಮದುವೆಯ ಕಾಲಕ್ಕೆ 2 ನೇ ಪ್ರತಿವಾದಿಗೆ ಅಪಘಾತದಿಂದಾಗಿ ಎರಡು ಕೈಗಳನ್ನು ಕಳೆದುಕೊಂಡಿದ್ದ ಎನ್ನುವುದು ನಿಜ. ಪ್ರತಿವಾದಿ ನಂ.2 ಮತ್ತು 3 ರವರು ಕುಟುಂಬದಿಂದ ಬೇರೆಯಾಗಿ ಅವರು ಪ್ರತ್ಯೇಕ ವಾಸಮಾಡುತ್ತಿದ್ದರು. ಪ್ರತಿವಾದಿ ನಂ.2 ಮತ್ತು 3 ರವರಿಗೆ ಸ್ವತಂತ್ರ ಆದಾಯ ಇರಲಿಲ್ಲ ಎನ್ನುವುದು ನಿಜ. ಸಾಕ್ಷಿ ಮುಂದುವರೆದು ಅದಕ್ಕಾಗಿಯೇ ನನ್ನ ಮಾವ ಅವರಿಗೆ ಅಂಗಡಿ ಹಾಕಿಕೊಟ್ಟಿದ್ದಾನೆ. 2 ನೇ ಪ್ರತಿವಾದಿ ಕಾಣೆಯಾದ ನಂತರ 3 ನೇ ಪ್ರತಿವಾದಿ ಒಬ್ಬಳೇ ವಾಸಿಸುತ್ತಿದ್ದಳು ಎಂದರೆ ಸಾಕ್ಷಿ ಅವಳ ತಂದೆ ತಾಯಿಯರು ಕೂಡ ವಾಸಿಸುತ್ತಿದ್ದರು ಎನ್ನುತ್ತಾರೆ. 3 ನೇ ಪ್ರತಿವಾದಿಯ ಜೊತೆ ಅವಳ ತಂದೆ ತಾಯಿ ಇರಲಿಲ್ಲ ಮತ್ತು ನನ್ನ ಮಾವ ಅವಳ ಜೊತೆ ವಾಸವಾಗಿದ್ದ ಎನ್ನುವುದು ಸರಿಯಲ್ಲ. ನನ್ನ ಮಾವ ಹಾಕಿಕೊಟ್ಟಿದ್ದ ಅಂಗಡಿಗೆ ಸಾಮಾನುಗಳನ್ನು ಆತನೇ ತಂದು ಹಾಕುತ್ತಿದ್ದ. ದಾವಾ ಆಸ್ತಿ ನನ್ನ ಮಾವನ ಸ್ವಯಾರ್ಜಿತ ಆಸ್ತಿ ಎನ್ನುವುದು ಸರಿಯಲ್ಲ. ತನ್ನ ಎಲ್ಲಾ ಮಕ್ಕಳಿಗೆ ಆಸ್ತಿ ಸಮನಾಗಿ ಹೋಗಬೇಕು ಎನ್ನುವ ಉದ್ದೇಶದಿಂದ ನನ್ನ ಮಾವ ವಿಲ್ ಬರೆದಿಟ್ಟಿದ್ದಾನೆ.

2012 ರಲ್ಲಿ ನನ್ನ ಮಾವನಿಗೆ ಅನಾರೋಗ್ಯವಾದಾಗ ಆತ ಪ್ರತಿವಾದಿ ನಂ.1 ಮತ್ತು 3 ಇಬ್ಬರ ಮನೆಗಳಲ್ಲಿ ಇರುತ್ತಿದ್ದ. 3 ನೇ ಪ್ರತಿವಾದಿಯ ಗಂಡ ನಾಪತ್ತೆಯಾದ ನಂತರ ಅವಳನ್ನು ನನ್ನ ಮಾವ ನೋಡಿಕೊಳ್ಳುತ್ತಿದ್ದ ಎನ್ನುವುದು ನಿಜ. ಪ್ರತಿವಾದಿ ನಂ.1 ಮತ್ತು ಪ್ರತಿವಾದಿ ನಂ.2 ಮತ್ತು 3 ರವರ ಮಧ್ಯೆ ಹೊಂದಾಣಿಕೆ ಇರದ ಕಾರಣ ಪ್ರತಿವಾದಿ ನಂ.2

ಮತ್ತು 3 ರವರು 1 ನೇ ಪ್ರತಿವಾದಿಯಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎನ್ನುವುದು ಸರಿಯಲ್ಲ. ನನ್ನ ಮಾವನಿಗೆ ಅನಾರೋಗ್ಯವಾದ ನಂತರ ಅಂಗಡಿ ನಡೆಸುವವರು ಯಾರು ಇರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 3 ನೇ ಪ್ರತಿವಾದಿ ನಡೆಸುತ್ತಿದ್ದಳು ಎನ್ನುತ್ತಾರೆ. ಅಂಗಡಿಯಿಂದ ಯಾವುದೇ ಆದಾಯ ಇರಲಿಲ್ಲ ಮತ್ತು 3 ನೇ ಪ್ರತಿವಾದಿಯನ್ನು ನೋಡಿಕೊಳ್ಳಲು ಯಾರು ಇರಲಿಲ್ಲ ಎನ್ನುವುದು ಸರಿಯಲ್ಲ. 2 ನೇ ಪ್ರತಿವಾದಿ ನಾಪತ್ತೆಯಾದ ನಂತರ 3 ನೇ ಪ್ರತಿವಾದಿಯನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

3 ನೇ ಪ್ರತಿವಾದಿಯನ್ನು ಹಳ್ಳಿಯಿಂದ ಮದುವೆ ಮಾಡಿಕೊಂಡು ಬಂದಿದ್ದರು ಎನ್ನುವುದು ಸರಿಯಲ್ಲ. 3 ನೇ ಪ್ರತಿವಾದಿಯ ತವರುಮನೆ ಹುರುಳಿಬೋರಸಂದ್ರ ಗ್ರಾಮ ಆಗಿರುತ್ತದೆ. ಆ ಗ್ರಾಮದಲ್ಲಿ 30-40 ವಾಸದ ಮನೆಗಳು ಇರುತ್ತವೆ. 3 ನೇ ಪ್ರತಿವಾದಿ 9 ನೇ ತರಗತಿಯವರೆಗೆ ಓದಿದ್ದಾಳೆ ಎನ್ನುವುದು ನಿಜ. 3 ನೇ ಪ್ರತಿವಾದಿ ಹೆಚ್ಚಿಗೆ ಓದಿಲ್ಲ ಮತ್ತು ಅವಳಿಗೆ ಯಾವ ಆದಾಯವಿಲ್ಲ ಎಂದು ಪರಿಗಣಿಸಿ ನನ್ನ ಮಾವ ದಾವಾ ಶೆಡ್ಯೂಲ್ ಐಟಂ ನಂ.1 ಆಸ್ತಿಯನ್ನು ನಿಪಿ.21 ರಂತೆ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಮಾವ ತೀರಿಹೋದ ಮೇಲೆ ನನಗೆ ನಿಪಿ.21 ದಾನಪತ್ರದ ಬಗ್ಗೆ ಗೊತ್ತಾಯಿತು. ನನ್ನ ಮಾವ ತೀರಿಕೊಂಡ ಮೇಲೆ ನಾನು ಆತ ಬರೆದಿಟ್ಟ ವಿಲ್ ಬಗ್ಗೆ ಕುಟುಂಬದ ಸದಸ್ಯರಿಗೆ ತಿಳಿಸಿದೆನು. ನನ್ನ ಮಾವ ವಿಲ್ ನ್ನು ಬರೆದಿಟ್ಟಿದ್ದರು ಸಹಾ ಆತ ತೀರಿಕೊಳ್ಳುವ ಮುಂಚೆ 3 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಅವಳಿಗೆ ನಿಪಿ.21 ರಂತೆ ದಾವಾ ಶೆಡ್ಯೂಲ್ ಐಟಂ ನಂ.1 ರ ಕುರಿತು ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ.

1 ನೇ ಪ್ರತಿವಾದಿಯ ಸಾಫ್ಟ್ ವೇರ್ ಇಂಜಿನಿಯರ್ ಆಗಿದ್ದಾನೆ ಎನ್ನುವುದು ನಿಜ. ನನ್ನ ಹೆಂಡತಿ ಕೂಡ ಇಂಜಿನಿಯರ್ ಆಗಿದ್ದಾಳೆ ಎನ್ನುವುದು ನಿಜ. ನನ್ನ ಮಾವನ ಜೀವಂತ ಕಾಲದಲ್ಲಿ 1 ನೇ ಪ್ರತಿವಾದಿ ಮತ್ತು ನನ್ನ ಹೆಂಡತಿಯಾಗಿರುವ ವಾದಿ ಕೆಲಸಕ್ಕೆ ಸೇರಿಕೊಂಡಿದ್ದರು ಎನ್ನುವುದು ನಿಜ. ನನಗೆ ಸಾಕಷ್ಟು ಆದಾಯವಿದೆ ಎನ್ನುವುದು ನಿಜ. 1 ನೇ ಪ್ರತಿವಾದಿಗು ಕೂಡ ಒಳ್ಳೆಯ ಆದಾಯವಿದೆ ಎನ್ನುವುದು ನಿಜ. ವಾದಿ ಮತ್ತು 1 ನೇ ಪ್ರತಿವಾದಿಗೆ ಒಳ್ಳೆಯ ಆದಾಯವಿರುವುದರಿಂದ ಮತ್ತು 3 ನೇ ಪ್ರತಿವಾದಿಗೆ ಯಾವುದೇ ಆದಾಯ ಇರದ ಕಾರಣ ನಿಪಿ.21 ರಂತೆ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಮಾವ ಜೀವಂತ ಇರುವಾಗ ವಾದಿ ಅಥವಾ 1 ನೇ ಪ್ರತಿವಾದಿ, 3 ನೇ ಪ್ರತಿವಾದಿಯನ್ನು ಸರಿಯಾಗಿ ನೋಡಿಕೊಳ್ಳದ ಕಾರಣ, ದಾವಾ ಶೆಡ್ಯೂಲ್ ಐಟಂ ನಂ.1 ರ

ಒ ಎಸ್ ನಂ.**1521/2013**
**ಪಿ.ಡಬ್ಲ್ಯೂ:2**

ಆಸ್ತಿಯಿಂದ ಬಾಡಿಗೆ ಬರುತ್ತಿದ್ದ ಕಾರಣ ಮತ್ತು ಅದು ಆತನ ಸ್ವಯಾರ್ಜಿತ ಆಸ್ತಿ ಯಾಗಿದ್ದ ಕಾರಣ 3 ನೇ ಪ್ರತಿವಾದಿಗೆ ಅನುಕೂಲವಾಗುವಂತೆ ನನ್ನ ಮಾವ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಹೆಂಡತಿಯಾಗಿರುವ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಾವ ಆತನ ಜೀವಿತಾವಧಿಯಲ್ಲಿಯೇ ದಾವಾ ಶೆಡ್ಯೂಲ್ ಐಟಂ ನಂ.1 ರ ಆಸ್ತಿಯ ಬಗ್ಗೆ ನಿಪಿ.21 ರಂತೆ ದಾನಪತ್ರ ಬರೆದುಕೊಟ್ಟಿರುವುದರಿಂದ ಆ ವಿಲ್ ಸದರಿ ಆಸ್ತಿಯ ಬಗ್ಗೆ ಊರ್ಜಿತವಾಗುವುದಿಲ್ಲ ಎನ್ನುವುದು ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಆಸ್ತಿ ಕೊಡಿ ಎಂದು ಗಲಾಟೆ ಮಾಡಿದ್ದರಿಂದ ನನ್ನ ಮಾವ ನಿಪಿ.41 ವಿಲ್ ಬರೆದುಕೊಟ್ಟಿದ್ದ ಎನ್ನುವುದು ಸರಿಯಲ್ಲ. ದಾವಾ ಶೆಡ್ಯೂಲ್ ಐಟಂ ನಂ.1 ಆಸ್ತಿ ನನ್ನ ಮಾವನ ಸ್ವಯಾರ್ಜಿತ ಆಸ್ತಿಯಾಗಿರುವ ವಿಷಯ ನನಗೆ ಗೊತ್ತಿದ್ದರು ಕೂಡ ನನ್ನ ಹೆಂಡತಿಯ ಮಾತು ಕೇಳಿ ಅದು ಸ್ವಯಾರ್ಜಿತ ಆಸ್ತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**